ಅಂಥವರನ್ನು ದಬ್ಬುವ ಯೋಚನೆ ಇರಬೇಕು ಎನ್ನುವ ಆತಂಕದಲ್ಲಿ 'ಸರ್, ಸ್ಪೆಷಲ್ ಕೇಸ್ ಅಂದ್ರೆ? ಪನಿಶ್‌ಮೆಂಟ್ ಟ್ರಾನ್ಸ್‌ಫರಾ?' ಎಂದು ಕೇಳಿದೆ. 'ನೋ ನೋ ಅದಲ್ಲ. ನೀವು ಹೇಳ್ತಿರ್ತೀರಲ್ಲಾ ಸೋಷಿಯಲ್ ಜಸ್ಟಿಸ್, ವುಮೆನ್ ಎಂಪವರ್‌ಮೆಂಟ್ ಎಂದೆಲ್ಲಾ, ಆ ಥರದ್ದು'.

ನಾನು ಜಿ.ಎಂ ಒಳ್ಳೆಯ ಲಹರಿಯಲ್ಲಿದ್ದಾಗ, 'ಸರ್, ಬರೀ ಪ್ರಾಫಿಟೇಬಿಲಿಟಿ, ಪ್ರೊಡಕ್ಟಿವಿಟಿ ಎನ್ನುವುದೇ ಆಗಿದೆ. ಜನಸಾಮಾನ್ಯರ ಬಗ್ಗೆ, ಮಹಿಳೆಯರಿಗೆ ಅವಕಾಶ ಕೊಡುವ ಬಗ್ಗೆ ಕೂಡಾ ಯೋಚಿಸ ಬೇಕಲ್ಲವೇ?' ಎಂದೆಲ್ಲಾ ಕೇಳುತ್ತಿದ್ದೆ. ಬಡತನವನ್ನು ಅನುಭವಿಸಿದವರಾದ್ದರಿಂದ ಅವರಲ್ಲಿ ಒಳ್ಳೆಯತನ ಇತ್ತು. ಆದರೆ, ಬದಲಾದ ಸನ್ನಿವೇಶದಲ್ಲಿ ಲಾಭ, ಉತ್ಪಾದಕತೆ ಬಿಟ್ಟು ಬೇರೆ ಯೋಚಿಸುವ ಸ್ಥಿತಿಯಲ್ಲಿ ಇರಲಿಲ್ಲ.

ಯಾಕೋ ನನ್ನನ್ನು ಕೆಣಕುತ್ತಿದ್ದಾರೆ ಅನ್ನಿಸಿ 'ಏನ್ ಸರ್. ಅಂಥಾ ಕೇಸ್?' ಕೇಳಿದೆ. 'ನ್ಯೂ ರಿಕ್ರೂಟ್‌ಮೆಂಟ್. ನಾನು ಆಕೆಯ ಜೊತೆ ಮಾತನಾಡಿದ್ದೇನೆ. ಶಿ ಇಸ್ ಕ್ಲೆವರ್. ಫಸ್ಟ್‌ಟೈಮ್ ಬೆಂಗಳೂರಿಗೆ ಬರುತ್ತಿದ್ದಾಳೆ. ಅವಳಿಗೆ ಸಹಾಯ ಮಾಡಬೇಕು, ಒಳ್ಳೆಯ ಜಾಗಕ್ಕೆ ಪೋಸ್ಟ್ ಮಾಡಬೇಕು ಅನುಸ್ತು. ಆಗ ನಿಮ್ಮ ನೆನಪಾಯಿತು. ಯಾವುದಕ್ಕೂ ನಿಮ್ಮ ಹತ್ತಿರ ಕೇಳೋಣ ಅಂತ ಫೋನ್‌ಮಾಡಿದೆ. ಐ ಆಮ್ ಶ್ಯೂರ್ ಶಿ ವಿಲ್ ಹ್ಯಾಂಡಲ್ ಕಸ್ಟಮರ್ಸ್. ಚೆನ್ನಾಗಿ ಕನ್ನಡ ಮಾತಾಡ್ತಾಳೆ. ಬಟ್ ಶಿ ಈಸ್ ಬ್ಲೈಂಡ್!'.

ನಾನು ಕಕ್ಕಾಬಿಕ್ಕಿಯಾದೆ. ಕಣ್ಣು ಕಾಣಿಸದವರನ್ನು ಕಟ್ಟಿಕೊಂಡು ಏನು ಮಾಡೋಣ? ಕೆಲ ತಿಂಗಳುಗಳ ಹಿಂದೆ ದೈಹಿಕ ಅಸಾಮರ್ಥ್ಯ ಉಳ್ಳವರ ನೇಮಕಾತಿ ನಡೆದಿತ್ತು. ಆಯ್ಕೆಯಾದವರನ್ನು ಸೂಕ್ತ ಜಾಗಗಳಿಗೆ ನೇಮಕ ಮಾಡುವುದು ತ್ರಾಸದ ಕೆಲಸವೇ. ಬ್ರಾಂಚ್ ಮ್ಯಾನೇಜರ್‌ಗಳು, ಸಿಬ್ಬಂದಿ ಸಾಮಾನ್ಯವಾಗಿ ಇಂತಹ ನೇಮಕಗಳನ್ನು ಇಷ್ಟಪಡುವುದಿಲ್ಲ. ಜಿಎಂ ತಮ್ಮ ತಲೆನೋವನ್ನು ನನಗೆ ವರ್ಗಾಯಿಸಿದ್ದರು. ನಾನು ನಿಷ್ಠುರವಾಗಿ ಬೇಡ ಎನ್ನುವ ಹಾಗಿರಲಿಲ್ಲ. ಹಲವು ವಿಷಯಗಳಲ್ಲಿ ನಮ್ಮಲ್ಲಿ ಕೊಡುಕೊಳುವ ವ್ಯವಹಾರವಿದೆ. ನಮ್ಮ ಬೇಡಿಕೆಗಳನ್ನು ಅವರು ಒಪ್ಪುತ್ತಾರೆ. ನಾವೂ ಕೆಲವು ವಿಷಯಗಳಲ್ಲಿ ಸಹಕಾರ ಕೊಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲ, ಇದು ಕಣ್ಣಿಲ್ಲದ ಹೆಣ್ಣೊಬ್ಬಳಿಗೆ ಅವಕಾಶ ಒದಗಿಸುವ ವಿಷಯ. ನಾನು ಮರು ಮಾತನಾಡದೆ ಕಳಿಸಿ ಎಂದೆ.

ಕಣ್ಣಿಲ್ಲದವರು ಜಾಯಿನ್ ಆಗುತ್ತಿರುವುದು ತಿಳಿದು ಎಲ್ಲರಿಗೂ ಅಸಾಮಾಧಾನವಾಯಿತು. ಜಿ.ಎಂ ನೇರವಾಗಿ ನನ್ನೊಡನೆ ಮಾತನಾಡುತ್ತಾರೆಂದು ಬ್ರಾಂಚ್ ಮ್ಯಾನೇಜರ್‌ಗೆ ಮೊದಲೇ ಅಸಹನೆ ಇತ್ತು. ಅವರು ತಮ್ಮ ಸಿಟ್ಟನ್ನು ನೇರವಾಗಿ ಹೊರಹಾಕಿ 'ಕುರುಡ, ಕುಂಟರೇ ಬ್ಯಾಂಕ್ ನಡೆಸಲಿ' ಎಂದು ನನಗೆ ಕೇಳುವಂತೇ ಆಡಿಕೊಂಡರು. ಚೈತ್ರಾ ಜಾಯಿನ್ ಆದಾಗ ಯಾವ ಡಿಪಾರ್ಟ್‌ಮೆಂಟ್‌ನವರೂ ಅವಳನ್ನು ಸೇರಿಸಿಕೊಳ್ಳಲು ಸಿದ್ಧರಿರಲಿಲ್ಲ. 'ಅವಳಿಗೆ ಕಲಿಸಿಕೊಡುವ ಸಮಯದಲ್ಲಿ ನಮ್ಮ ಕೆಲಸ ಮುಗಿಸಿ ಕೊಳ್ಳುತ್ತೇವೆ; ಆಕೆಯಿಂದ ಏನೂ ಅನುಕೂಲ ಆಗುವುದಿಲ್ಲ' ಎಂದೇ ಹೇಳಿದರು. 'ಸರ್ಕಾರ ಇಂಥವರಿಗೆ ಕೆಲಸ ಕೊಡುವ ಬದಲು ಮನೆಯಲ್ಲಿ ಕೂರಿಸಿ ತಿಂಗಳಿಗೆ ಇಂತಿಷ್ಟು ಎಂದು ಕೊಟ್ಟರೆ ಒಳಿತು, ನಮ್ಮ ಕಷ್ಟ ತಪ್ಪುತ್ತದೆ' ಎಂದು ಸಾರ್ವಜನಿಕ ಕಲ್ಯಾಣದ ಬಗ್ಗೆ ಚಿಂತೆ ಮಾಡಿದವರೂ ಇದ್ದರು.

ಎಲ್ಲರ ನಿಂದನೆಗೆ ಗುರಿಯಾದ ನಾನು ಕೆಲವು ದಿನಗಳ ಕಾಲ ಆಕೆಗೆ ನೆರವು ನೀಡತೊಡಗಿದೆ. ಹೇಳಿದ್ದನ್ನು ಅರ್ಥ ಮಾಡಿಕೊಂಡು, ತನಗೆ ಅನುಕೂಲವಾಗುವ ರೀತಿಯಲ್ಲಿ ನೋಟ್ಸ್ ಮಾಡಿ, ಚೈತ್ರಾ ತನ್ನದೇ ವಿಧಾನದಲ್ಲಿ ಕೆಲಸ ಮಾಡುತ್ತಿದ್ದಳು. ಕೆಲಸದಲ್ಲಿ ಅವಳಿಗೆ ಆಸಕ್ತಿ ಇತ್ತು. ಎಲ್ಲರೊಡನೆ ಸಂಕೋಚವಿಲ್ಲದೆ ನಡೆದುಕೊಳ್ಳುತ್ತಿದ್ದಳು. ಅವಳ ಇಂಪಾದ ದನಿ, ಸೊಗಸಾದ ಹುಬ್ಬಳ್ಳಿ ಕಡೆಯ ಕನ್ನಡ ಗ್ರಾಹಕರನ್ನೂ ಸೆಳೆದಿತ್ತು. ಕೆಲಸಕ್ಕೆ ಸೇರಿದ ಶುರುವಿನಲ್ಲಿ ಹತ್ತಿರ ಸೇರಿಸಲು ಹಿಂಜರಿದವರು, ಅನುಮಾನದಲ್ಲಿ ನೋಡುತ್ತಿದ್ದ ಮಹಿಳಾ ಸಹೋದ್ಯೋಗಿಗಳು ಕ್ರಮೇಣ ತಮ್ಮಲ್ಲೊಬ್ಬಳಂತೆ ನಡೆಸಿಕೊಳ್ಳತೊಡಗಿದರು.

ಹಾಗಿದ್ದರೂ ಚೈತ್ರಾ ಎಲ್ಲರಿಗಿಂತ ಹೆಚ್ಚಾಗಿ ಇಷ್ಟ ಪಡುತ್ತಿದ್ದುದು ನನ್ನನ್ನೇ! ನನಗದು ಹೆಮ್ಮೆಯ ವಿಷಯವೂ ಆಗಿತ್ತು. ಕಣ್ಣಿಲ್ಲದವಳನ್ನು ಸೇರಿಸಿ ಕೊಳ್ಳಲು ಒಪ್ಪಿ, ಎಲ್ಲರ ಬಿರುನುಡಿಗಳನ್ನು ಸಹಿಸಿ, ಒಂದಿಷ್ಟು ಕೆಲಸ ಕಲಿಸಿದೆ ಎಂದು ಹೆಮ್ಮೆ ಪಟ್ಟಿದ್ದೆ. ನಮ್ಮಲ್ಲಿ ದಿನದ ಕೆಲವು ಹೊತ್ತಾದರೂ ಮಾತುಕತೆ